ಹಳ್ಳದ ಪ್ರವಾಹವು ತುಂಬಿ ಹರಿದು, ನಾವು ರಾತ್ರಿ ಮಲಗಿರುವಲ್ಲಿ ನಮ್ಮ ಹಟ್ಟಿಗೂ ನೀರು ನುಗ್ಗಿಬಿಟ್ಟರೇನು ಗತಿ ಎಂಬ ಭಯವಾಗುತಿತ್ತು. ಬೆಳಗ್ಗೆ ಮಳೆ ಸ್ವಲ್ಪ ಹೊಳವು ಕೊಟ್ಟರೂ ತೊರೆಯ ದಡದಲ್ಲಿ ನಿಂತು ಹರಿಯುತ್ತಿದ್ದ ಪ್ರವಾಹ ನೋಡುತ್ತಿದ್ದೆವು. ಗಿಡಮರಗಳು ಕಿತ್ತು ಉರುಳಿ ಬರುವಂತೆ ದನ, ಕರು, ಕುರಿ, ಮೇಕೆ ನೀರಿಗೆ ಸಿಕ್ಕಿ ತೇಲಿಬರುತ್ತಿದ್ದವು. ಅವು ಹೇಗಾದರೂ ಈಜಿ ದಡ ಸೇರಿ ಬದುಕಲು ಹೋರಾಟ ನಡೆಸುತ್ತಿದ್ದವು. ಇತ್ತ ನಮ್ಮವೆಲ್ಲ ತೊಟ್ಟಿ ಮನೆಗಳು. ಬಿದ್ದ ಮಳೆ, ಮನೆಯೊಳಗಿನ ತೊಟ್ಟಿಯೊಳಗೆ ಜಲಪಾತದಂತೆ ಸುರಿದು ಹೊರಕ್ಕೆ ಹರಿಯಬೇಕಿತ್ತು. ಬೀದಿಯೆಲ್ಲ ಕೆಸರು. ಜನ ಅದರಲ್ಲೇ ನೋಡಿ ನೋಡಿ ಹೆಜ್ಜೆಯೂರಿ ನಡೆಯಬೇಕು. ಅತ್ತಿತ್ತಲಾದರೆ ಜಾರುವುದು ಗ್ಯಾರಂಟಿ. ಯಾರಿಗೂ ಛತ್ರಿ ಹಿಡಿಯುವುದು ಅಭ್ಯಾಸವಿಲ್ಲ. ತಲೆಯ ಮೇಲೆ ಗೋಣಿಚೀಲದ ಗೊರಬು. ದನದ ಕೊಟ್ಟಿಗೆಗೆ ಹೆಜ್ಜೆ ಇಡುವಂತಿಲ್ಲ. ರಾತ್ರಿಯೆಲ್ಲ ಗಂಜಳ ಹುಯ್ದು, ಸಗಣಿ ಹಾಕಿ ರಾಡಿ ಮಾಡಿರುತ್ತಿದ್ದವು. ಬೆಳಗ್ಗೆ ತಿಪ್ಪೆಗೆ ಸುರಿಯುವುದೇ ರಣಗೆಲಸ. ಹಗಲೆಲ್ಲವೂ ಅರೆಗತ್ತಲೆಯಂತೆ! ಮಳೆಯ ಸಂಬಂಧ ಗಾದೆಗಳೂ ಆಗ ಅಸಂಖ್ಯಾತ ಪ್ರಯೋಗಗೊಳ್ಳುತ್ತಿದ್ದವು. ಮಳೆ ಹೊಳವು ಕೊಟ್ಟರೆ ಶಾಲೆಗೆ ಹೋಗುತ್ತಿದ್ದ ನಾವು ಅಲ್ಲಲ್ಲಿ ಕೂತು ಕಡ್ಡಿಯಲ್ಲಿ ನೆಲ ಕೊರೆಯುತ್ತಿದ್ದೆವು. ಅರ್ಧ ಅಡಿ ಗುಳಿ ತೋಡಿದರೆ ಸಾಕು ನೀರು ಮೇಲೆ ಬಂದು ಸಣ್ಣ ಕಾಲುವೆಯಾಗಿ ಹರಿಯುತ್ತಿತ್ತು. ಆ ಕಾಲುವೆಯನ್ನು ಮತ್ತೆ ಒಂದೆರಡು ಮಾರು ಮುಂದಕ್ಕೆ ಎಳೆದು ಸಣ್ಣ ಸಣ್ಣ ಕಾಗದದ ದೋಣಿ ಮಾಡಿ ಹರಿಸುತ್ತಿದ್ದೆವು. ಅದರೊಳಕ್ಕೆ ನಾಲ್ಕಾರು ಇರುವೆಗಳನ್ನೂ ಹಿಡಿದು ಬಿಡುತ್ತಿದ್ದೆವು. ದೋಣಿ ತಟ್ಟಾಡಿಕೊಂಡು ತೇಲುವಲ್ಲಿ ಇರುವೆಗಳು ದೋಣಿಯ ಸುತ್ತೆಲ್ಲ ಸುಳಿದಾಡಿ ದಡ ಕಾಣಲು ಹವಣಿಸುತ್ತಿದ್ದವು.

★★★

ಘನಂದಾರಿ ಪಟ್ಟಣ ಸೇರಿ ಏನು ಓದಬೇಕೆಂಬುದೇ ಗೊತ್ತಾಗದೆ, ಬರದೇ ಹೋದ ವಿಜ್ಞಾನವನ್ನೋ, ಇನ್ನೂ ಕಣ್ಣಿಗೆ ಕಾಣದ, ಕೇಳದ ಕಲೆಯನ್ನೋ, ಓದಿದರೆ ಯಾವುದಾದರೂ ಸಣ್ಣಪುಟ್ಟ ನೌಕರಿ ದೊರೆಯಬಹುದೇ ಎಂಬ ಆಸೆಯೊಂದಿಗೆ ಗ್ರಾಮವಾತಾವರಣ ಬಿಟ್ಟು ಬೆಂಗಳೂರಿಗೆ ಹೊಂದಿಕೊಳ್ಳಲಾರದೆ ವಿಲವಿಲ ಒದ್ದಾಡುತ್ತ, ತೇಲುತ್ತ ಮುಳುಗುತ್ತಿದ್ದ ನಾನು ಬರೆಯಲೇನೂ ಗೊತ್ತಾಗದೆ ಮೇಲಿನ ಮಳೆಯ ಅಧ್ವಾನವನ್ನಷ್ಟೇ ಬರೆದಿದ್ದೆ. ಜೀವಿಯವರು ಅಷ್ಟರಲ್ಲಿ ಯಾಕೆ ನೀನು ಕನ್ನಡ ಆನರ್ಸ್ ಓದಬಾರದು ಎಂದರು. ಹೇಗೋ, ಎಂತೋ ನನ್ನೊಳಗೇ ಸೇರಿಕೊಂಡಿದ್ದ ಜನಪದ ಮತ್ತು ಕನ್ನಡ ಕಾವ್ಯ ಕಥನಗಳಿಗೆ ಪ್ರೊ. ಜೀವಿ ಅವರ ಸಾಹಿತ್ಯ ಬೋಧನೆ ಸೇರಿಕೊಂಡಿತು.

ನನಗೆ ಸಿಕ್ಕಿದ ಮೊದಲ ವಿದ್ವಾಂಸರು, ವಿಮರ್ಶಕರು ಚಳ್ಳಕರೆಯ ಬಿಸಿನೀರು ಬಸಣ್ಣನವರು. ಚಳ್ಳಕೆರೆಯ ಸಣ್ಣ ಪಟ್ಟಣದ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನಾಗಿ ಸೇರಿದಾಗ ಒಮ್ಮೆ ಹೋಟೆಲಿನ ಗದ್ದಲದಲ್ಲಿ ಬೆಳಗೆರೆಯವರಾದ ಕೃಷ್ಣಶಾಸ್ತ್ರಿಗಳು ಭೇಟಿಯಾದರು. ಅವರು ಗಾಂಧಿವಾದಿಗಳಂತೆ ಇದ್ದು, ಹುಟ್ಟೂರಿನಲ್ಲಿ ಶಾಲೆ ನಡೆಸುತ್ತ, ಆದರ್ಶ ಶಿಕ್ಷಕರೆಂಬ ಪ್ರಶಸ್ತಿಯೂ ಬಂದಿತ್ತು. ಅವರು ಒಮ್ಮೆ ಬಿಸಿನೀರು ಬಸಣ್ಣನವರೊಡನೆ ಕಾಲೇಜಿನ ಅಂಗಳಕ್ಕೆ ಬಂದರು. ನಾನು ವಿದ್ಯಾರ್ಥಿಗಳೊಂದಿಗೆ ವಾಲಿಬಾಲ್ ಆಡುತ್ತಿದ್ದೆ. ಇಬ್ಬರೂ ಹಿರಿಯರು ದೂರದಲ್ಲಿ ನಿಂತು ನನ್ನ ನೆಗೆದಾಟ ನೋಡುತ್ತಿದ್ದರು. ಆಟ ನಿಂತ ಮೇಲೆ ನನ್ನ ಬಳಿ ಬಂದರು. ಅಲ್ಲಿಂದ ಅವರೊಂದಿಗೆ ಮೆಲ್ಲಮೆಲ್ಲಗೆ ನನ್ನ ಸಾಹಿತ್ಯ ಸಂಬಂಧಿ ಮಾತುಕತೆ ಮುಂದುವರೆಯಿತು. ಬಸಣ್ಣನವರು ಪಂಪನ ಆದಿಪುರಾಣ ಕುರಿತು ಮಾತು ತೆಗೆದರು. ನಾನು ಅದನ್ನು ಓದಿಯೇ ಇರಲಿಲ್ಲ. ಹಾಗೆಯೇ